UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
06-10-2026
Tuesday

ಯುವಕರಿಗೆ ಸ್ವಯಂ ಕೃಷಿ ಪೂರಕ

ಬೆಂಗಳೂರು: ಸ್ವಯಂ ಕೃಷಿ ಇಂದಿನ ಯುವ ಜನಾಂಗಕ್ಕೆ ಕನ್ನಡಿಯಾಗಿದೆ ಎಂದು ಹಿರಿಯ ನಟ ಸುಚೇಂದ್ರ ಪ್ರಸಾದ್ ತಿಳಿಸಿದರು.



ಯುವ ಜನಾಂಗಕ್ಕೆ ಅರಿವು ಮೂಡಿಸುವ ಸಲುವಾಗಿ ಬೆಂಗಳೂರಿನ ಹೊರವಲಯ ತಾವರೆಕೆರೆ ಹೋಬಳಿ, ಕೋಲೂರು ಗ್ರಾಮದಲ್ಲಿ ಕೃಷಿಕ ರವಿ.ಕೆ.ಎಸ್ ಸಾರಥ್ಯದಲ್ಲಿ ಸ್ವಯಂ ಕೃಷಿ ಪರಿಕಲ್ಪನೆಯ, ಕೃಷಿ ಥೀಮ್ ಪಾರ್ಕ್, ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಯಂ ಕೃಷಿ ಇಂದಿನ ಯುವ ಜನಾಂಗಕ್ಕೆ ಕನ್ನಡಿಯಾದರೊಂದಿಗೆ ಚಿತ್ರರಂಗಕ್ಕೂ ಶೂಟಿಂಗ್ ನಡೆಸಲು ಸಹಕಾರಿಯಾಗಿದೆ. ಉದ್ಯಮಿ, ಕೃಷಿಕ ರವಿ.ಕೆ.ಎಸ್ ಮುಂದೆ ಚಿತ್ರ ನಿರ್ಮಾಣ ಮಾಡಲು ಚಿಂತನೆ ನಡೆಸಿದ್ದಾರೆ. ಚಿತ್ರರಂಗಕ್ಕೆ ಇಂತಹವರ ಸೇವೆ ಅವಶ್ಯಕವಾಗಿದೆ. ಮುಂದಿನ ದಿನಗಳಲ್ಲಿ ಕಲಾವಿದರುಗಳನ್ನು ಕರೆಸಿ ಮತ್ತಷ್ಟು ವಿಷಯ ಪ್ರಸಾರ ಮಾಡಲು ಕ್ರಮ ವಹಿಸುತ್ತೇನೆಂದು ಹೇಳಿದರು.

Hosadiganta Pg.10

Hosadiganta Pg.08

ಚಾಮರಾಜನಗರ ಜಿಲ್ಲೆಯಲ್ಲಿ ಕೇಂದ್ರ ಬರ ಅಧ್ಯಯನ ತಂಡ | ವಾಸ್ತವ ವಿವರಿಸಿದ ಜಿಲ್ಲಾಧಿಕಾರಿ

ಒಣಗಿದ ಜೋಳದ ಬೆಳೆಯ ದರ್ಶನ

ಚಾಮರಾಜನಗರ: ಜಿಲ್ಲೆಯ ಬರ ಪರಿಸ್ಥಿತಿಯ ಅಧ್ಯಯನ ಕ್ಕಾಗಿ ಆಗಮಿಸಿರುವ ಕೇಂದ್ರದ ವಿವಿಧ ಸಚಿವಾಲಯಗಳ ಉನ್ನತ ಮಟ್ಟದ ಅಧಿಕಾರಿಗಳ ತಂಡವು (ಎಂಎಚ್‌ಟಿ) ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಬರದ ವಾಸ್ತವ ಪರಿಸ್ಥಿತಿಯನ್ನು ಖುದ್ದು ಪರಿಶೀಲಿಸಿತು.

ಭಾರತ ಸರ್ಕಾರದ ಪಶುಸಂಗೋಪನೆ ಮತ್ತು ಡೈರಿಗಾರಿಕೆ ಉಪ ಆಯುಕ್ತರಾದ ಡಾ. ಸುಧಾಮ್ ಬೇಗ್, ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉಪ ಸಲಹೆಗಾರರಾದ ಅಖಿಲ್ ಖಾಂಡೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧೀನ ಕಾರ್ಯದರ್ಶಿ ಪ್ರದೀಪ್ ಕುಮಾರ್, ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ಮಹಾಲನೋಬಿಸ್ ರಾಷ್ಟ್ರೀಯ ಬೆಳೆ ಮಾಹಿತಿ ಕೇಂದ್ರ (ಎಂಎಸ್‌ಎನ್‌ಪಿ)ದ ಉಪನಿರ್ದೇಶಕರಾದ ಕರಣ್ ಚೌಧರಿ ಅವರನ್ನೊಳಗೊಂಡ ಅಧಿಕಾರಿಗಳ ತಂಡ ಬರ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟು ಪರಿಸ್ಥಿತಿಯನ್ನು ಅವಲೋಕಿಸಿತು.

ಚಾಮರಾಜನಗರ ತಾಲೂಕಿನ ಕೆರೆಹಳ್ಳ ಗ್ರಾಮದ ರೈತರಾದ ಮಾದಪ್ಪ ಎಂಬುವರಿಗೆ ಸೇರಿದ ಜಮೀನಿಗೆ ಭೇಟಿ ನೀಡಿ ಒಣಗಿದ ಜೋಳದ ಬೆಳೆಯನ್ನು ಅಧಿಕಾರಿಗಳ ತಂಡ ವೀಕ್ಷಿಸಿದರು. ಇದೇ ವೇಳೆ ಹಾಜರಿದ್ದ ರೈತರೊಂದಿಗೆ ಅಧಿಕಾರಿಗಳು ಮಾತನಾಡಿ ಬೆಳೆ ನಷ್ಟ ಬಿತ್ತನೆ ಸಂಬಂಧ ಮಾಹಿತಿ ಪಡೆದರು. ಜಿಲ್ಲಾಧಿಕಾರಿ ಶ್ರೀರೂಪಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋಣ್, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಭಾನುಪ್ರಕಾಶ್ ಅವರು ಸ್ಥಳೀಯ ಬೆಳೆ ಹಾನಿ ಕುರಿತು ವಿವರ ಒದಗಿಸಿದರು. ಬಳಿಕ ಅಧಿಕಾರಿಗಳ ತಂಡ ಮಲೆಯೂರ ಕಣಿವೆಗೆ ಭೇಟಿ ನೀಡಿ ವೀಕ್ಷಣೆ ಮಾಡಿದರು. ಅಲ್ಲಿನ ಗೋಶಾಲೆ ನಿರ್ವಹಣೆ ಸಂಬಂಧ ವಿವರ ಪಡೆದರು. ಸಮೀಪದಲ್ಲಿಯೇ ದಾಸ್ತಾನು ಮಾಡಲಾಗಿದ್ದ ಮೇವು ಸಂಗ್ರಹವನ್ನು ವೀಕ್ಷಿಸಿದರು. ಕುಲಗಾಣ ಗ್ರಾಮಕ್ಕೆ ಭೇಟಿ ನೀಡಿ ವಿಪ ಜೆ ರಾಮ್ ಜಿ ಯೋಜನೆಯಲ್ಲಿ ಅಳವಡಿಸಿರುವ ಕಾಲುಕಿನ ನಿಟ್ಟಿ ಗ್ರಾಮಕ್ಕೆ ತೆರಳಿ ಬೋಕೇಲ್ಲರು. ನಾಗವಾಲು ಎಂಬುವರಿಗೆ ಸೇರಿದ ಜಮೀನಿನಲ್ಲಿ ನಿಲ್ಲಿಲ್ಲದೆ ಒಣಗಿ ಹೋಗಿದ್ದ ಸೂರ್ಯಕಾಂತಿ ಬೆಳೆಯನ್ನು ವೀಕ್ಷಿಸಿದರು. ಸ್ಥಳೀಯ ರೈತರು ಅಧಿಕಾರಿಗಳ ತಂಡದ ಮುಂದೆ ತಮ್ಮ ಕುಂದು ಕೊರತೆಗಳನ್ನು ನಿವೇದಿಸಿಕೊಂಡರು.

ಇದೇ ವೇಳೆ ಅಧಿಕಾರಿಗಳ ತಂಡಕ್ಕೆ ಮಾಹಿತಿ ನೀಡಿದ ಕೃಷಿ ವಿಜ್ಞಾನ ಕೇಂದ್ರದ ಡಾ.ಶ್ರುತಿ ಅವರು ಈ ಹಿಂದಿನ ಸಾಲಿನಲ್ಲಿ



ಪರಿಹಾರಕ್ಕಾಗಿ ರೈತರ ಮನವಿ

ಸಿರಿಲ್ಲದೆ ನಾವು ಹಾಕಿದ್ದ ಬೆಳೆ ಕೈಸೇರಿಲ್ಲ, ಈ ಭಾಗದಲ್ಲಿ ಮಳೆಯಲ್ಲೇ ಆಶ್ರಯಿಸಿ ಬಿತ್ತನೆ ಮಾಡಿದ್ದು ಫಸಲು ಬಂದಿಲ್ಲ ಕುಡಿಯುವ ನೀರು, ಜಾನುವಾರುಗಳ ಮೇವಿಗೂ ಸಹ ತೊಂದರೆಯಾಗಿದೆ. ಹೀಗಾಗಿ ನಾವು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದೇವೆ. ಸಮಗೆ ಹೆಚ್ಚಿನ ಪರಿಹಾರ ದೊರಕಬೇಕು ಎಂದು ರೈತರು ಮನವಿ ಮಾಡಿದರು.

ಎಕರೆ 30ರಿಂದ 40 ಸಾವಿರ ಖರ್ಚು

ಈ ಭಾಗದಲ್ಲಿ ತೊಗರಿ, ಜೋಳ, ಕಬ್ಬು, ಹುರಳಿ, ಅರಿಷಿಣ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದು, ಈ ಬಾರಿ ಮಳೆ ಕೊರತೆಯಿಂದ ಎಲ್ಲಾ ಬೆಳೆಗಳು ಒಣಗಿ ಹೋಗಿದೆ. ಬಿತ್ತನೆಗಾಗಿ ಎಕರೆಗೆ 30 ರಿಂದ 40 ಸಾವಿರ ಖರ್ಚು ಮಾಡಿದ್ದೇವೆ. ಬೆಳೆ ಹಾನಿಯಿಂದ ನಾವು ಸಂಕಷ್ಟದಲ್ಲಿದ್ದೇವೆ. ಸಮಗೆ ವೈಜ್ಞಾನಿಕವಾಗಿ ಪರಿಹಾರ ನೀಡಬೇಕು ಎಂದು ಮನವಿ ಸ್ಥಳೀಯ ರೈತರು ತಿಳಿಸಿದರು.

ಸಮರ್ಪಕವಾಗಿ ಮಳೆಯಾಗಿಲ್ಲ. ಈ ಬಾರಿ ಮಳೆಯ ಆಗಮನದಿಂದ ಹೆಚ್ಚಿನ ಬೆಳೆ ನಷ್ಟವಾಗಿದೆ ಎಂದು ವಿವರಿಸಿದರು. ಬಳಿಕ ಗುಂಡ್ಲುಪೇಟೆ ತಾಲೂ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಶ್ರೀರೂಪಾ ಅವರು ಮಳೆ, ಬೆಳೆ, ಕುಡಿಯುವ ನೀರು, ಜಾನುವಾರುಗಳ ಮೇವು ಸೇರಿದಂತೆ ಜಿಲ್ಲೆಯು ಎದುರಿಸುತ್ತಿರುವ ಬರ ಪರಿಸ್ಥಿತಿಯ ಸಂಪೂರ್ಣ ವಿವರ ನೀಡಿದರು. ಜಿಲ್ಲಾ ಸಚಿವ ಮೋನಾ ರೋಣ್ ಅವರು ವಿಪ ಜೆ ರಾಮ್ ಜಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿ ವಿವರ ಹಾಗೂ ಕುಡಿಯುವ ನೀರಿನ ಸಮಸ್ಯೆ ಕುರಿತು ತಂಡಕ್ಕೆ ಮಾಹಿತಿ ಒದಗಿಸಿದರು.

ಜಿಲ್ಲಾ ಉಪ ಕಾರ್ಯದರ್ಶಿ ಶೃತಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಗಿರೀಶ್, ಪಶುಸಂಗೋಪನೆ ಇಲಾಖೆ ಉಪನಿರ್ದೇಶಕರಾದ ಮಂಜುನಾಥ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಅಮಾಸ್ಯಮೆಲ್ ಸಂತೋಷ್, ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಸುರೇಖಾ, ಸಾರ್ಡ್ ಅಧಿಕಾರಿ ಪಿಕಾ ಸುವರ್ಣ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.

Hosadiganta Pg.12

ರಾಮನಗರ ರೇಷ್ಮೆ ಮಾರುಕಟ್ಟೆಯಲ್ಲಿ ಜಾರಿ: ಅ.1ರಿಂದಲೇ ಇ-ಪೇಮೆಂಟ್ ವ್ಯವಸ್ಥೆ

ರೇಷ್ಮೆ ಬೆಳೆಗಾರರ ಖಾತೆಗೆ ಹಣ ನೇರ ಜಮೆ

ಎಸ್. ರುದ್ರೇಶ್ವರ

ರಾಮನಗರ: ಇಲ್ಲಿನ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಇನ್ನು ಮುಂದೆ ಗೂಡು ಹರಾಜು ಹಾಗೂ ತೂಕ ಪ್ರಕ್ರಿಯೆ ಮುಗಿದ ಮರುಕ್ಷಣವೆ ರೈತರ ಬ್ಯಾಂಕಿನ ಖಾತೆಗೆ ಹಣ ನೇರವಾಗಿ ಜಮೆಯಾಗಲಿದೆ. ಏಷ್ಯಾದ ಎರಡನೇ ಅತಿದೊಡ್ಡ ರೇಷ್ಮೆ ಮಾರುಕಟ್ಟೆ ಎಂಬ ಹೆಗ್ಗಳಿಕೆ ಹೊಂದಿರುವ ರಾಮನಗರ ಮಾರುಕಟ್ಟೆಯಲ್ಲಿ ಅ.1ರಿಂದ ಇ-ಪೇಮೆಂಟ್ ವ್ಯವಸ್ಥೆ ಜಾರಿಗೆ ಬಂದಿದೆ.

ಇದರಿಂದ ರಾಜ್ಯದ ನಾನಾ ಜಿಲ್ಲೆಗಳಷ್ಟೇ ಅಲ್ಲದೆ ಹೊರ ರಾಜ್ಯಗಳಿಂದ ರೇಷ್ಮೆ ಗೂಡು ಮಾರಾಟಕ್ಕೆ ಬರುವ ರೈತರಿಗೂ ಅನುಕೂಲ ವಾಗಲಿದೆ. ಇದುವರೆಗೆ ಹರಾಜು ಮತ್ತು ತೂಕ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಹಣಕ್ಕಾಗಿ ಮರುದಿನದವರೆಗೆ ಕಾಯಬೇಕಾದ ಪರಿಸ್ಥಿತಿ ಇತ್ತು.

ಮಾರುಕಟ್ಟೆ ವ್ಯವಸ್ಥೆ ಸುಧಾರಿಸುವ ಉದ್ದೇಶದಿಂದ ಇ-ಹರಾಜು, ಇ-ತೂಕ ಹಾಗೂ ಇ-ಪೇಮೆಂಟ್ ವ್ಯವಸ್ಥೆ ಅಳವಡಿಸಿ ಕೊಳ್ಳಲು ಎಂಟು ವರ್ಷಗಳ ಹಿಂದೆಯೇ ಅವಕಾಶವಾಗಿತ್ತು. ಇ-ಹರಾಜು ಮತ್ತು ಇ-ತೂಕ ವ್ಯವಸ್ಥೆ ಜಾರಿಯಾಗಿದ್ದರೂ, ಇ-ಪೇಮೆಂಟ್ ಮಾತ್ರ ಕಾರಣಾಂತರಗಳಿಂದ ಅನುಷ್ಠಾನಗೊಂಡಿರಲಿಲ್ಲ. ರೀಲರ್ಸ್‌ಗಳಿಂದ ಮಾರುಕಟ್ಟೆಗೆ ಹಣ ಪಾವತಿಯಾಗುವಲ್ಲಿ ವಿಳಂಬವಾಗುತ್ತಿದ್ದ ಕಾರಣ ರೈತರ



ಖಾತೆಗೆ ಹಣ ಮರುದಿನ ಜಮೆಯಾಗುತ್ತಿತ್ತು. ಕೆಲ ಸಂದರ್ಭಗಳಲ್ಲಿ ಚೆಕ್ ಬೌನ್ಸ್ ಪ್ರಕರಣವೂ ವರದಿ ಏಳಲು ಸೆರಿದಂತೆ ರೈತರು ಸಮಸ್ಯೆ ಎದುರಿಸುತ್ತಿದ್ದರು. ಇದಕ್ಕೆ ಪರಿಹಾರವಾಗಿ ಇದೀಗ ನೇರ ಇ-ಪೇಮೆಂಟ್ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ.

ರಾಮನಗರ ರೇಷ್ಮೆ ಮಾರುಕಟ್ಟೆಗೆ ಪ್ರತಿದಿನ ಸರಾಸರಿ 40 ರಿಂದ 50 ಟನ್ ರೇಷ್ಮೆ ಗೂಡು ಆವಕವಾಗುತ್ತದೆ. ಪ್ರಮುಖವಾಗಿ ಬೈವೋಲ್ಟಿನ್ (ದ್ವಿತಳಿ) ಬಗೆಗೂಡಿನ ಆವಕ ಹೆಚ್ಚಾಗಿದೆ. ಪ್ರತಿದಿನ ಸುಮಾರು 40ರಿಂದ 5 ಕೋಟಿ ವಹಿವಾಟು ನಡೆಯುತ್ತಿದ್ದು, ವಾರ್ಷಿಕ ವಹಿವಾಟು 1,000 ಕೋಟಿಗೂ ಅಧಿಕವಾಗಿದೆ. ರಾಜ್ಯದ ಬೆಳಗಾವಿ, ವಿಜಯಪುರ, ಕಲಬುರಗಿ, ಧಾರವಾಡ, ಬಳ್ಳಾರಿ, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಹಲವು ಜಿಲ್ಲೆಗಳಿಂದ ರೈತರು ಆಗಮಿಸುತ್ತಾರೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕೇರಳದಿಂದಲೂ ರೇಷ್ಮೆ ಬೆಳೆಗಾರರು ಗೂಡು ಮಾರಾಟಕ್ಕೆ ಬರುತ್ತಾರೆ. ಸುಮಾರು 500 ರೀಲರ್ಸ್ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಾರೆ.

ಮಾರುಕಟ್ಟೆಯಲ್ಲಿ ಹರಾಜು ಮುಗಿದ ಬಳಿಕ ಸ್ಥಳೀಯ ರೈತರು ಜಾಲರಿಗಳಿಗೆ ಬಿದಲ್ ಕಟ್ಟುವುದು ಅಥವಾ ಗೂಡು ಇಡುವ ಮೂಲಕ ಸ್ಥಳ ಕಾಯ್ದಿರಿಸುತ್ತಿದ್ದರು. ಇದರಿಂದ ಉತ್ತರ ಕರ್ನಾಟಕ ಹಾಗೂ ಹೊರ ರಾಜ್ಯಗಳಿಂದ ಕಡಿಮೆ ಆಗಮಿಸುವ ರೈತರು ಇದೀಗ ಜಾಲರಿ ವಡೆಯಲು ತೊಂದರೆಯಾಗುತ್ತಿತ್ತ ಪದ್ಧತಿಗೂ ನಿರ್ಬಂಧ ಹೇರಲಾಗಿದೆ. ರೈತರು ಗೂಡನ್ನು ಮಾರುಕಟ್ಟೆ ತಂದ ಬಳಿಕ ಅಂದಾಜು ತೂಕ ಮಾಡಿ ಟೋಕನ್ ಪಡೆಯಬೇಕು. ನಂತರದ ಜಾಲರಿಯಲ್ಲಿಯೇ ಇಡಬೇಕು. ಇದರಿಂದ ಟೋಕ ದೂ ಊರುಗಳಿಂದ ಬರುವ ರೈತರಿಗೆ ಸ್ಥಳದ ಸಮ ತಪ್ಪಲಿದೆ.

ಅ.1ರಿಂದ ಇ-ಪೇಮೆಂಟ್ ವ್ಯವಸ್ಥೆ ಜಾರಿಗೆ ಬಂದಿದೆ. ಆಗಸ್ಟ್ ತಂತ್ರಾಂಶ ಅಳವಡಿಸಲಾಗಿದ್ದು, ರೈತರು ಮತ್ತು ರೀಲರ್ಸ್‌ಗಳಿಗೆ ಅರಿವು ಮೂಡಿಸಲಾಗಿದೆ. ಗೂಡು ಹರಾಜು ಹಾಗೂ ತೂಕವಾದ ಮರುಕ್ಷಣವೇ ರೈತರ ಖಾತೆಗೆ ಹಣ ಜಮೆಯಾಗಲಿದೆ. ವ್ಯವಸ್ಥೆಯಲ್ಲಿ ಮಾನವ ಹಸ್ತಕ್ಷೇಪ ಇರುವುದಿಲ್ಲ ಅಂತಿಮ ವಿಳಂಬವಾದಲ್ಲಿ ರೈತರು ಸಹಾಯವಾಣಿ ಸಂಖ್ಯೆ 1800 425 5555ಗೆ ಕರೆ ಮಾಡಿ ದೂರು ನೀಡಬಹುದು ಎಂದು ಮಾರುಕಟ್ಟೆಯ ಉಪನಿರ್ದೇಶಕ ಕೃಷ್ಣ ಮೂರ್ತಿ ತಿಳಿಸಿದರು.

ಹೊಸಗೂಡಿಗೂ ನಿಯಮ

ಇ-ಪೇಮೆಂಟ್ ವ್ಯವಸ್ಥೆಯಲ್ಲಿ ರೀಲರ್ಸ್ ಗಳಿಗೂ ಹೊಸ ಗೂಡು ನಿಯಮ ಜಾರಿಯಾಗಲಿದೆ. ಪರಿಣಾಮವಾಗಿ ರೀಲರ್ಸ್‌ಗಳು ಮಾರುಕಟ್ಟೆಗೆ ಬಂದಾಗಲೇ ನಿಗದಿತ ಖಾತೆಗೆ ಹಣ ಪಾವತಿಸಬೇಕು. ಹಣ ಪಾವತಿಸಿದ ಬಳಿಕವೇ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುತ್ತದೆ.

ತೂಕದ ಬಳಿಕ ಟೋಕನ್

ರೈತರು ಗೂಡನ್ನು ಮಾರುಕಟ್ಟೆಗೆ ತಂದಾಗ ಹಾಗೂ ಅಂದಾಜು ತೂಕ ಮಾಡಿ ಟೋಕನ್ ನೀಡಲಾಗುತ್ತದೆ. ಬಳಿಕ ಗೂಡು ಹರಾಜು ಇ-ತೂಕ ಪೂರ್ಣಗೊಂಡ ಮರುಕ್ಷಣವೇ ರೈತರ ಬ್ಯಾಂಕ್ ಖಾತೆಗೆ ಹಣ ನೇರವಾಗಿ ಜಮೆಯಾಗಲಿದೆ. ಇದಕ್ಕಾಗಿ ಅನ್ಯ ತಂತ್ರಾಂಶ ಅಭಿವೃದ್ಧಿಪಡಿಸಿ ಅಳವಡಿಸಲಾಗಿದೆ. ರೀಲರ್ಸ್‌ಗಳ ಸಭೆ ನಡೆಸಿ ವ್ಯವಸ್ಥೆಯ ಕುರಿತು ಅರಿವು ಮೂಡಿಸಲಾಗಿದೆ.

ಮಧುರಾನುಭೂತಿ

ಚಿಟ್ಟೆಯೆಂಬ ಜೀವಂತ ಚಿತ್ರಪಟ

ಪ್ರಕೃತಿ ನಿರ್ಮಿಸಿದ ಕಲಾವಿದನಿಗೆ ಬಣ್ಣಗಳ ಕೊರತೆಯೇ ಇಲ್ಲ, ಆದರೆ, ಅವನು ತನ್ನ ಅತ್ಯಂತ ಸೂಕ್ಷ್ಮವಾದ ಕುಂಚವನ್ನು ಚಿಟ್ಟೆಗಳ ರೆಕ್ಕೆಗಳ ಮೇಲೆ ಪ್ರಯೋಗಿಸಿದಾಗ, ಹುಟ್ಟಿದ ಅದ್ಭುತವೇ ಈ ಲೋಕದ ಸೌಂದರ್ಯದ ಜೀವಂತ ಚಿತ್ರಪಟ. ಚಿಟ್ಟೆಯ ರೆಕ್ಕೆಗಳು ಕೇವಲ ಹಾರಾಟದ ಸಾಧನವಲ್ಲ, ಅವು ಪ್ರಕೃತಿಯ ಕನಸುಗಳನ್ನೂ, ಋತುಗಳ ನೆನಪುಗಳನ್ನೂ, ಬೆಳಕಿನ ಸಂಗೀತವನ್ನೂ ಹೊತ್ತಿರುವ ಕ್ಯಾನ್ವಾಸ್‌ಗಳು.



ಚಿಟ್ಟೆಗಳ ರೆಕ್ಕೆಗಳು ಮತ್ತಗಿನ ಬಣ್ಣದ ಹಾಳೆಗಳಂತೆ ಕಂಡರೂ ಅಸಂಖ್ಯಾತ ಸೂಕ್ಷ್ಮ ಚಿಪ್ಪುಗಳಿಂದ ನಿರ್ಮಿತವಾದ ಅವುಗಳ ಮೇಲ್ಮೈ ಬೆಳಕನ್ನು ಸ್ವೀಕರಿಸಿ, ಪ್ರತಿಫಲಿಸಿ, ಬಣ್ಣಗಳ ಭ್ರಮೆಯನ್ನು ಸೃಷ್ಟಿಸುತ್ತವೆ. ಸೂರ್ಯನ ಕಿರಣ ಸೋಕಿದಾಗ ಒಂದು ಕ್ಷಣ ನೀಲಿಯಾಗಿ ಹೊಳೆಯುವ ರೆಕ್ಕೆಗಳು, ನೆರಳಿಗೆ ಸರಿದಾಗ ಗಾಢ ಕಪ್ಪಾಗಿ ಕಾಣಬಹುದು. ಬೆಳಕನ್ನೊಂದಿಗೆ ಬಣ್ಣ ಬದಲಿಸುವ ಈ ಅದ್ಭುತ ಗುಣ ಚಿಟ್ಟೆಯನ್ನು ಪ್ರಕೃತಿಯ ಜೀವಂತ ಕನ್ನಡಿಯಾಗಿಸಿದೆ. ಅದರ ರೆಕ್ಕೆಗಳಲ್ಲಿ ಆಕಾಶವಿದೆ, ಹೂವಿದೆ, ಮಣ್ಣಿದೆ, ಮಳೆಹನಿಯ ಫಳಫಳಿಸುವ ಹೊಳಪೂ ಇದೆ. ಪ್ರತಿಯೊಂದು ಚಿಟ್ಟೆಯ ರೆಕ್ಕೆಯೂ ಒಂದು ಚಿತ್ರ. ಪ್ರತಿಯೊಂದು ಹಾರಾಟವೂ ಆ ಚಿತ್ರದ ಚಲನಾತ್ಮಕ ಪ್ರದರ್ಶನ.

ಚಿಟ್ಟೆಯ ಜೀವನವೇ ರೂಪಾಂತರದ ಮಹಾಕಾವ್ಯ. ಮೊದಲು ಅದು ನೆಲದ ಮೇಲೆ ಹರಿದಾಡುವ ಮರಿಹುಳುವಾಗಿ ಜನಿಸಿರುತ್ತದೆ. ನಂತರ ತನ್ನನ್ನು ತಾನೇ ಮೌನದ ಕೋಶದಲ್ಲಿ ಮುಚ್ಚಿಕೊಂಡು, ರೂಪಾಂತರದ ದೀರ್ಘ ನಿದ್ರೆಗೆ ಜಾರುತ್ತದೆ. ಆ ನಿಶ್ಶಬ್ದದೊಳಗೆ ಹಳೆಯ ದೇಹ ಕರಗಿ ಹೊಸ ರೂಪ ಮೂಡುತ್ತದೆ. ಕೋಶ ಒಡೆದು ಹೊರಬರುವ ಕ್ಷಣದಲ್ಲಿ ಅದು ಹಳೆಯ ಬದುಕಿಗೆ ವಿದಾಯ ಹೇಳಿ, ಬಣ್ಣಗಳ ಸ್ವಾತಂತ್ರ್ಯವನ್ನು ಅಪ್ಪಿಕೊಂಡಿರುತ್ತದೆ. ಅದರ ಹಾರಾಟದಲ್ಲಿ ಬಂಧನ ಮುರಿದ ಆತ್ಮೋಲ್ಲಾಸವಿರುತ್ತದೆ. ಚಿಟ್ಟೆಗಳ ಬದುಕು ಬದಲಾವಣೆ, ಹೊಸಜನ್ಮ, ಸ್ವಾತಂತ್ರ್ಯ ಮತ್ತು ಸೌಂದರ್ಯದ ಮೌನ ಪಾಠ.

ಚಿಟ್ಟೆಯೊಂದು ತನ್ನಂತೆ ಅಲ್ಪಾಯುಷಿಯಾದರೂ ಆಕರ್ಷಕ ಹೂಗಳೊಂದಿಗೆ ಸ್ನೇಹ ಬೆಳೆಸುವ ದೃಶ್ಯ ಯಾರಿಗೆ ತಾನೇ ಮುದ ನೀಡುವುದಿಲ್ಲ? ಆ ನೆನಪು ಎಂದಿಗೂ ಅಳಿಯುವುದಿಲ್ಲ, ಸೌಂದರ್ಯ ಶಾಶ್ವತವಲ್ಲ, ಹೀಗಾಗಿ ಪ್ರತಿಕ್ಷಣದಲ್ಲೂ ಸ್ನೇಹ, ಪ್ರೀತಿ ಮರೆಯಕೂಡದು ಎಂಬುದನ್ನು ಅದು ನಮಗೆ ಹೇಳಿಕೊಡುತ್ತದೆ. ಇಂದು ಕಾಂಕ್ರೀಟ್ ಕಾಡುಗಳು, ಕೀಟನಾಶಕಗಳು, ಒಣಗುತ್ತಿರುವ ಕೆರೆಗಳು, ಕಡಿಮೆಯಾಗುತ್ತಿರುವ ಹಸಿರು ಪ್ರದೇಶಗಳು ಚಿಟ್ಟೆಗಳ ಲೋಕವನ್ನು ಕಿರಿದಾಗಿಸುತ್ತಿವೆ. ಅವುಗಳ ಅಸ್ತಿತ್ವ ಸವಾಲಾಗಿದೆ. ಚಿಟ್ಟೆಗಳನ್ನು ಉಳಿಸುವುದೆಂದರೆ ಕೇವಲ ಕೀಟವೊಂದನ್ನು ಉಳಿಸುವುದಲ್ಲ, ಬಣ್ಣಗಳ, ಹೂಗಳ, ಗಾಳಿಯ ಮತ್ತು ಪರಿಸರದ ಸಮತೋಲನವನ್ನು ಉಳಿಸುವುದು. ಆದ್ದರಿಂದ ನಮ್ಮ ಮನೆಗಳ ಸುತ್ತಲೂ ಹೂಗಿಡಗಳನ್ನು ಬೆಳೆಸಬೇಕಿದೆ. ಮಕ್ಕಳಿಗೆ ಚಿಟ್ಟೆಗಳನ್ನು ಹಿಡಿಯುವುದಕ್ಕಿಂತ, ಅವು ಹಾರುವುದನ್ನು ನೋಡಿ ಸಂತೋಷಪಡುವುದನ್ನು ಹೇಳಿಕೊಡಬೇಕಿದೆ.

Vijaya Karnataka Pg.06

ತರಕಾರಿ, ಸೊಪ್ಪು ದರ ಏರಿಕೆ

■ ವಿಕ ಸುದ್ದಿಲೋಕ ಬೆಂಗಳೂರು



ಟೊಮೆಟೊ, ಬೀನ್ಸ್ ಸೇರಿದಂತೆ ನಾನಾ ತರಕಾರಿ, ಕೊತ್ತಂಬರಿ ಸೊಪ್ಪು, ಪಾಲಕ್ ಮತ್ತಿತರ ಸೊಪ್ಪಿನ ಬೆಲೆಗಳು ಕಳೆದ ಒಂದು ವಾರದಿಂದೀಚೆಗೆ ದುಬಾರಿಯಾಗಿವೆ.

ಕಳೆದ ವಾರ ಹಲವೆಡೆ ಮಳೆಯಾಯಿತು. ಹೀಗಾಗಿ, ಟೊಮೆಟೊ ಹಣ್ಣುಗಳು ಉದುರಿದವು. ಕೆಲವು ಕೊಳೆಯಲಾರಂಭಿಸಿದವು. ಹೀಗಾಗಿ, 25 ರೂ. ಇದ್ದ ಟೊಮೆಟೊ ದರ ಏಕಾಏಕಿ ದುಪ್ಪಟ್ಟಾಗಿದೆ. ಇನ್ನು ಬೀನ್ಸ್ ಕೂಡ 70 ರೂ. ಇದ್ದುದು ಈಗ ಸೆಂಚುರಿಯತ್ತ ದಾಟುತ್ತಿದೆ. ಅದೇ ರೀತಿ ಕ್ಯಾಪ್ಸಿಕಂ, ಸೌತೆಕಾಯಿ, ತೊಂಡೆಕಾಯಿ, ಬೀಟ್ ರೂಟ್ ಸೇರಿದಂತೆ ನಾನಾ ತರಕಾರಿಗಳ ದರ ಏರಿಕೆಯಾಗಿದೆ.

ಮಳೆಯಿಂದಾಗಿ ಸೊಪ್ಪಿನ ಬೆಳೆಗಳಿಗೂ ಹಾನಿಯಾಗಿದ್ದು, ಅದರ ಬೆಲೆಯೂ ದುಬಾರಿಯಾಗಿದೆ. ಕೊತ್ತಂಬರಿ ಸೊಪ್ಪು, ಪಾಲಕ್, ಹರಿವೆ, ದಂಟು, ಸಬ್ಬಸಿಗೆ, ಮೆಂತ್ಯ ಸೇರಿದಂತೆ ಬಹುತೇಕ ಸೊಪ್ಪುಗಳ ದರ ಸ್ವಲ್ಪ ಏರಿಕೆಯಾಗಿದೆ. ಇದರ ಜತೆಗೆ ನಿಂಬೆಹಣ್ಣು ಸ್ವೀಟ್‌ಕಾರ್ನ್ ದರ ಕೂಡ ಗಗನಕ್ಕೇರಿದೆ. ಒಂದು ನಿಂಬೆಹಣ್ಣಿನ ದರ 8-10 ರೂ. ವರೆಗೆ ಏರಿಕೆಯಾದರೆ, 10 ರೂಪಾಯಿಗೆ ಸಿಗುತ್ತಿದ್ದ ಒಂದು ಸ್ವೀಟ್ ಕಾರ್ನ್ ಬರೋಬ್ಬರಿ 25 ರೂ.ಗೆ ಏರಿಕೆಯಾಗಿದೆ. ಇದೇ ರೀತಿ ಹಲವು ತರಕಾರಿ, ಸೊಪ್ಪುಗಳ ದರ ಏರಿಕೆಯಿಂದ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಸಾಮಾನ್ಯವಾಗಿ ಈ ಸೀಸನ್‌ನಲ್ಲಿ ಸೌತೆಕಾಯಿ ಕೆ.ಜಿ.ಗೆ 20-25 ರೂ. ಇರುತ್ತಿದ್ದುದು ಇದೀಗ 45 ರೂ.ಗೆ ಏರಿಕೆಯಾಗಿದೆ.

ಈ ಬಾರಿ ಮುಂಗಾರು ಮಳೆ ವಾಡಿಕೆಯಷ್ಟು ಬಾರದ ಪರಿಣಾಮ ವಾತಾವರಣದಲ್ಲಿ ಉಷ್ಣಾಂಶ ಏರಿಕೆಯಾಯಿತು. ಹೀಗಾಗಿ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ದೊಡ್ಡ ಪ್ರಮಾಣದಲ್ಲಿ ಹೂಡೆತ ಅನುಭವಿಸಿದವು. ತಾಪಮಾನ ಏರಿಕೆಯಿಂದಾಗಿ ತತ್ತರಿಸಿದ್ದ ಭೂಮಿ ಮತ್ತು ಬೆಳೆಗಳಿಗೆ ದಿಢೀರ್ ಮಳೆ ಬಿದ್ದಿದ್ದರಿಂದ ಕಾದ ಬಾಣಲಿಗೆ ನೀರು ಬಿದ್ದಂತಾಗಿದೆ. ಹೀಗಾಗಿ, ಬೆಳೆಗಳಿಗೆ ಹಾನಿ ಉಂಟಾಗಿದ್ದರಿಂದ ಇಳುವರಿ ಮತ್ತು ಉತ್ಪಾದನೆ ಕುಂಠಿತಗೊಂಡಿತು. ಹೀಗಾಗಿ, ಬೆಲೆ ಏರಿಕೆಯಾಗಿವೆ. ಚಿಲ್ಲರೆ ಮಾರಾಟಗಾರರು ಒಂದು ಕಂತೆ ಸೊಪ್ಪಿಗೆ 30 ರೂ.ನಂತೆ ಮಾರುತ್ತಿದ್ದಾರೆ.

ಸೊಪ್ಪು-ತರಕಾರಿಗಳ ದರ
(ಕೆ.ಜಿ.-ರೂ.ಗಳಲ್ಲಿ)

ಬೀನ್ಸ್	96 ರೂ.
ಬದನೆಕಾಯಿ (ಬಿಳಿ)	50 ರೂ.
ದಪ್ಪಮೆಣಸಿನಕಾಯಿ	60 ರೂ.
ಗೋರಿಕಾಯಿ (ಬಿಡಿ)	80 ರೂ.
ಸೌತೆಕಾಯಿ	44 ರೂ.
ಮೂಲಂಗಿ	45 ರೂ.
ಬೀಟ್‌ರೂಟ್	48 ರೂ.
ಚಪ್ಪರದ ಅವರೆಕಾಯಿ	135 ರೂ.
ನವಿಲುಕೋಸು	48 ರೂ.
ತೊಂಡೆಕಾಯಿ	44 ರೂ.
ಎಲೆಕೋಸು	36 ರೂ.
ಈರುಳ್ಳಿ	79 ರೂ.
ಬೆಳ್ಳುಳ್ಳಿ	320 ರೂ.
ಟೊಮೆಟೊ	54 ರೂ.
ಮೆಂತ್ಯ ಸೊಪ್ಪು	120 ರೂ.
ಆರಿವೆ ಸೊಪ್ಪು	54 ರೂ.
ದಂಟಿನ ಸೊಪ್ಪು	75 ರೂ.
ಸಬ್ಬಸಿಗೆ ಸೊಪ್ಪು	128 ರೂ.
ಪಾಲಾಕ್ ಸೊಪ್ಪು	90 ರೂ.
ನಾಟಿ ಕೊತ್ತಂಬರಿ ಸೊಪ್ಪು	130 ರೂ.

(ಹಾಪ್‌ಕಾಮ್ಸ್‌ದರ)

Vijaya Karnataka Pg.08

ICAR-INDIAN VETERINARY RESEARCH INSTITUTE
HEBBAL :: BENGALURU - 560 024.Tel: 080-23412835

File No.2-LHDCP/2022(Part-2) Dated: 05.10.2026

WALK-IN-INTERVIEW

Interview for filling up the post of Young Professional-I(ONE) under National Animal Disease Control Programme(NADCP-FMD and Brucellosis), at ICAR-IVRI, Hebbal, Bengalure-560024 will be conducted on **12.10.2026 at 10.00 am** in the institute premises. Interested candidates may please visit our office or institute website for further details, with regard to project details, eligibility criteria, terms & conditions and application format **(https://www.ivri.nic.in/otherpages/NewJobs.aspx).**

Sd/- Asstt. Admn. Officer

Vijaya Karnataka Pg.09